ಇ)

ವರ್ಷ	ಖರ್ಚು ಮಾಡಿರುವ ಮೊತ್ತ (ರೂ ಲಕ್ಷಗಳಲ್ಲಿ)
2003–04	10 67
2004–05	4 74
2005–06	6 56
2006–07 (ಡಿಸೆಂಬರ್ 2006ರ ಅಂತ್ಯದವರೆಗೆ	4 63
ಒಟ್ಟು	26 60

ಈ) ಜಮಖಂಡಿ ತಾಲ್ಲೂಕಿನ 07 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ದಿನಾಂಕ 16 01 2007 ರಂದು ಚಾಲನೆ ನೀಡಲಾಗಿದೆ

ಇ) ಇದೆ

23 (48) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಪ್ರವಾಸಿಮಂದಿರದ ಈಗಿನ ಸ್ಥಿತಿ ಸರ್ಕಾರದ ಗಮನದಲ್ಲಿದೆಯೇ ,

ಆ) ಈ ಪ್ರವಾಸಿ ಮಂದಿರದ ದುರಸ್ಥಿ ಮಾಡಿ ನವೀಕರಿಸುವ ಯೋಜನೆ ಸರ್ಕಾರಕ್ಕಿದೆಯೇ ,

ಇ) ಹಾಗಿದ್ದಲ್ಲಿ, ಯಾವಾಗ ನವೀಕರಣ ಮಾಡಲಾಗುವುದು ,

ಈ) ಪ್ರವಾಸಿ ಮಂದಿರವನ್ನು ನವೀಕರಿಸಲು ತಗಲುವ ಅಂದಾಜು ವೆಚ್ಚವೆಷ್ಟು ,

ಉ) ಪ್ರವಾಸಿ ಮಂದಿರದ ರಸ್ತೆ ನಿರ್ಮಾಣ ನವೀಕರಣ ಅಂದಾನಿನ್ನಲಿಯೇ ಸೇರಿದೆಯೇ ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಇದೆ

ಆ) ಇದೆ

ಇ) ಅನುದಾನ ಪ್ರಾಪ್ತವಾದ ನಂತರ ನವೀಕರಣ ಮಾಡಲಾಗುವುದು

ಈ) ಅಂದಾಜು 15 00 ಲಕ್ಷ (ನವೀಕರಣ ಹಾಗೂ ರಸ್ತೆ ಕಾಮಗಾರಿ ಸೇರಿ) ಬೇಕಾಗಬಹುದು

ಉ) ಸೇರಿದೆ

25 (76) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು ,

ಆ) ಡಾ ಡಿ ಎಂ ನಂಜುಂಡಪ್ಪ ವರದಿಯನ್ವಯ ಅತೀ ಹಿಂದುಳಿದ ತಾಲ್ಲೂಕುಗಳಿಗೆ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಕೆರೆಗಳ ಸ್ಥಿತಿ–ಗತಿಗಳನ್ನು ಆಧರಿಸಿ ಹಾಗೂ ಅಚ್ಚುಕಟ್ಟಿನಲ್ಲಿ ಬರುವ ರೈತರ ಬೇಡಿಕೆಗೆ ಅನುಗುಣವಾಗಿ ಲಭ್ಯವಿರುವ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಇದಕ್ಕಾಗಿ ಪ್ರತ್ಯೇಕವಾದ ಮಾನದಂಡಗಳು ಇರುವುದಿಲ್ಲ

ಆ ಮತ್ತು ಇ) ಮುಂದಿನ ಆರ್ಥಿಕ ವರ್ಷದಲ್ಲಿ ಅನುದಾನದ ಲಭ್ಯತೆಯನ್ನು ಅನುಸರಿಸಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು

26 (77) ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಸರ್ಕಾರ ವಿವಿಧ ಇಲಾಖೆಗಳಿಗೆ ನೀಡಲಾದ ಅನುದಾನವೆಷ್ಟು , (ಇಲಾಖಾವಾರು ವಿವರ ನೀಡುವುದು) ,

ಆ) ಈ ಅನುದಾನದಲ್ಲಿ ಇದುವರೆವಿಗೂ ಖರ್ಚಾಗಿರುವ ಹಣ ಎಷ್ಟು , (ಇಲಾಖಾವಾರು ವಿವರ ಒದಗಿಸುವುದು) ,